ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

8

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19 -

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ   ದಿನಾಂಕ : DATE 10/4/21

## 8 ನಗರಗಳಲ್ಲಿ ಇಂದಿನಿಂದ ನೈಟ್ ಕರ್ಫ್ಯೂ

# ಅಗತ್ಯಸೇವೆಗೆ ಅವಕಾಶ ರಾತ್ರಿಪಾಳಿ ಅಬಾಧಿತ

ಕರೊನಾ ಸೋಂಕು ಪ್ರಕರಣಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಬೆಂಗಳೂರು ಸೇರಿದಂತೆ ರಾಜ್ಯದ 8 ನಗರಗಳಲ್ಲಿ ಘೋಷಿಸಲಾಗಿರುವ ರಾತ್ರಿ ಕರ್ಫ್ಯೂ ಶನಿವಾರದಿಂದ ಜಾರಿಗೆ ಬರಲಿದೆ. ಯಾವುದಕ್ಕೆ ಅವಕಾಶ ಇರುತ್ತದೆ, ಯಾವುದಕ್ಕೆ ಇರುವುದಿಲ್ಲ ಎನ್ನುವ ಕುರಿತ ಸಾರ್ವಜನಿಕ ಗೊಂದಲ ಬಗೆಹರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಶುಕ್ರವಾರ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ.

### ಏನೇನಿರುತ್ತದೆ?

- ಆರೋಗ್ಯ ಸಂಬಂಧಿ ಸಮಸ್ಯೆಗಳಿಂದ ಬಳಲುವ ವ್ಯಕ್ತಿಗಳು ಮತ್ತು ಅವರ ಸಹಾಯಕರು ವೈದ್ಯಕೀಯ ಸೇವೆಗಾಗಿ ಸಂಚರಿಸಲು ಅನುಮತಿ



- ಕಾರ್ಖಾನೆ, ಕಂಪನಿಗಳು ಹಾಗೂ ಸಂಸ್ಥೆಗಳ ರಾತ್ರಿಪಾಳಿ ಯಥಾರೀತಿ. ಸಂಬಂಧಿಸಿದ ನೌಕರರು/ಕಾರ್ಮಿಕರು ಕರ್ಫ್ಯೂ ಅವಧಿಗೆ ಮುಂಚೆ ಕರ್ತವ್ಯದಲ್ಲಿ ಹಾಜರಿರಬೇಕು.
- ದೂರಸಂಪರ್ಕ, ಅಂತರ್ಜಾಲ ಸೇವಾ ಸಂಸ್ಥೆಗಳು, ಐಟಿ-ಬಿಟಿ ಆಧಾರಿತ ಸಂಸ್ಥೆಗಳ ಸಿಬ್ಬಂದಿಗೆ ಗುರುತಿನ ಚೀಟಿ ಸಹಿತ ರಾತ್ರಿ ಸಂಚಾರಕ್ಕೆ ಅವಕಾಶ
- ಅತ್ಯವಶ್ಯಕ ಸೇವೆ ಒದಗಿಸುವ ವಾಹನಗಳು, ಸರಕು ಸಾಗಣೆ ವಾಹನಗಳು, ಮನೆಗೆ ವಿಲೇವಾರಿ, ಇ-ಕಾಮರ್ಸ್, ಖಾಲಿ ವಾಹನಗಳ ಸಂಚಾರಕ್ಕೆ ಅನುಮತಿ
- ರಾತ್ರಿ ವೇಳೆಯಲ್ಲಿನ ಬಸ್, ರೈಲು ಹಾಗೂ ವಿಮಾನದ ದೂರ ಪ್ರಯಾಣಕ್ಕೆ ಅಸ್ತು
- ಅಧಿಕೃತ ಟಿಕೆಟ್ ಆಧಾರದಲ್ಲಿ ಮನೆಯಿಂದ ನಿಲ್ದಾಣಗಳು ಮತ್ತು ನಿಲ್ದಾಣದಿಂದ ಮನೆಗೆ ಆಟೋ/ ಕ್ಯಾಬ್ ಇತ್ಯಾದಿ ಮೂಲಕ ಸಂಚರಿಸಬಹುದು.